ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರ 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೆ. ರಾಮಲಿಂಗಯ್ಯ | ಚಾಸಾಃ : 35 |
| ತಂದೆಯ ಹೆಸರು | : | ಕಾಳಿಂಗಯ್ಯ | ಫ್ರಾಸಾಃ 14 |
| ಪ್ರಾಯ | : | 65 ವರ್ಷ | ದಿನಾಂಕಃ 28.01.2026 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಅಂಚೆ ಅಧೀಕ್ಷಕರು | |
| ವಾಸಸ್ಥಳ | : | ಬೆಂಗಳೂರು | |

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2019 ರಿಂದ ಸೆಪ್ಟಂಬರ್ 2021 ರವರೆಗೆ ಬೆಂಗಳೂರು Foreign Post office ಚಾಮರಾಜಪೇಟೆ, ಬೆಂಗಳೂರು ಇಲ್ಲಿ Superintendent ಆಗಿ ಕೆಲಸ ಮಾಡಿರುತ್ತೇನೆ.

2. ದಿಃ 19.06.2021 ರಂದು ಮಂಗಳೂರು ಪೂರ್ವ ಪೊಲೀಸ್ ಠಾಣೆಯಿಂದ ಒಂದು ವಿದೇಶಿ ನೊಂದಣಿ ಅಂಚೆ ಪತ್ರದ ಬಗ್ಗೆ ನಮಗೆ ಮಾಹಿತಿಯನ್ನು ಕೇಳಿ ಅದರ ಜೊತೆಗೆ ಒಂದು ನೊಂದಣಿ ಅಂಚೆಯ ಜೆರಾಕ್ಸ್ ಪ್ರತಿಯನ್ನು ಕಳುಹಿಸಿದ್ದರು. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–37 ಎಂದು ಗುರುತಿಸಲಾಯಿತು. ಸದರಿ ನೊಂದಣಿ ಅಂಚೆಯ ಜೆರಾಕ್ಸ್ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ–38 ಎಂದು ಗುರುತಿಸಲಾಯಿತು.

3. ನಿಪಿ–37 ಕ್ಕೆ ನಾನು ಇಮೇಲ್ ಮೂಲಕ ಅದೇ ದಿನ ಉತ್ತರವನ್ನು

ಕಳುಹಿಸಿರುತ್ತೇನೆ. ಸದರಿ ಇಮೇಲ್ ನ್ನು ನೋಡುತ್ತಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ–39 ಎಂದು, ಸಾಕ್ಷಿ ಸಹಿಯನ್ನು ನಿಪಿ–39(ಎ) ಎಂದು ಗುರುತಿಸಲಾಯಿತು.

4. ನಾನು ದಿಃ 18.08.2021 ರಂದು ನಿಪಿ–37 ಕ್ಕೆ ವಿವರವಾದ ಉತ್ತರವನ್ನು ಕೊಟ್ಟಿರುತ್ತೇನೆ. ಸದರಿ ಉತ್ತರವನ್ನು ನೋಡುತ್ತಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ–40 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ತಕರಾರಿಗೆ ಒಳಪಟ್ಟು ನಿಪಿ–40(ಎ) ಎಂದು ಗುರುತಿಸಲಾಯಿತು.

5. ನಿಪಿ 38 ಫ್ರಾನ್ಸ್ ದೇಶದಿಂದ ಬಂದಿರುತ್ತದೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಬಿ. ವಕೀಲರ ಪರವಾಗಿ ಶ್ರೀ ವಿ.ಆರ್.ಎ. ವಕೀಲರಿಂದಃ**

6. ಸದರಿ ಪಾರ್ಸಲ್ ಫ್ರಾನ್ಸ್ ದೇಶದಿಂದ ಬಂದಿರುವುದಿಲ್ಲ ಮತ್ತು ನಾನು ಪೊಲೀಸರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.